प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA

संचार विभाग, केंद्रीय कार्यालय, एस.बी.एस.मार्ग, मुंबई-400001
वेबसाइट : www.rbi.org.in/hindi

DEPARTMENT OF COMMUNICATION, Central Office, S.B.S.Marg, Mumbai-400001
Website : www.rbi.org.in

फोन/Phone: 91 22 2266 0502 फैक्स/Fax: 91 22 22660358
इ-मेल email: helpdoc@rbi.org.in

ನವಂಬರ್ 16, 2015

**"L" ಒಳಾಕ್ಷರವಿರುವ ₹ 1000 ರ ಬ್ಯಾಂಕು ನೋಟುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ**

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ರಘುರಾಮ್ ಜಿ. ರಾಜನ್ ಅವರ ಸಹಿಯುಳ್ಳ, ಬ್ಯಾಂಕು ನೋಟಿನ ಹಿಂದೆ ಮುದ್ರಣ ವರ್ಷ 2015ನ್ನು ಮುದ್ರಿಸಿರುವ, ಎರಡೂ ಸಂಖ್ಯಾಂಕಣಗಳಲ್ಲಿ "L" ಒಳಾಕ್ಷರವಿರುವ , ಮಹಾತ್ಮಾ ಗಾಂಧಿ ಶ್ರೇಣಿ -2005 ರ, ₹1000 ರ ಬ್ಯಾಂಕು ನೋಟುಗಳನ್ನು ಶೀಘ್ರದಲ್ಲಿಯೇ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ**.**ಈಗ ನೀಡಲಿರುವ ನೋಟುಗಳ ವಿನ್ಯಾಸವು ಈ ಹಿಂದೆ ನೀಡಲಾದ ಮಹಾತ್ಮಾ ಗಾಂಧಿ ಶ್ರೇಣಿ - 2005 ರ ₹**1000** ಬ್ಯಾಂಕು ನೋಟುಗಳಂತಯೇ ಇರುತ್ತವೆ ಹಾಗೂ ಇದರ ಜೊತೆಗೆ ಹೆಚ್ಚುವರಿ ಲಕ್ಷಣಗಳಾದ ಸಂಖ್ಯಾಂಕಣಗಳಲ್ಲಿ ಗಾತ್ರದಲ್ಲಿ ಹೆಚ್ಚಾಗುತ್ತಾ ಹೋಗುವ ಕ್ರಮ ಸಂಖ್ಯೆಗಳು**,** ಬಾಗಿದ ಅಂಚಿನ ಗೆರೆಗಳು ಮತ್ತು ಮುಂಭಾಗದಲ್ಲಿ ಎದ್ದು ಕಾಣುವ ಗುರುತು ಚಿನ್ಹೆಯೂ ಇರುತ್ತವೆ.

ಈ ಹಿಂದೆ ನೀಡಲಾದ ₹**1000** ರ ಮೌಲ್ಯವರ್ಗದ ಎಲ್ಲಾ ನೋಟುಗಳೂ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ**.**

ಅಲ್ಪನಾ ಕಿಲ್ಲಾವಾಲ
ಪ್ರಧಾನ ಮುಖ್ಯ ಮಹಾ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ:2015-2016/1158